ಊರಿನಲ್ಲಿ ದೇವನಹಳ್ಳಿನೋ ಅಥವಾ ಚಿಕ್ಕಬಳ್ಳಾಪುರನೋ ಒಂದು ಬಿಂದಿಗೆಗೆ ಎಷ್ಟೋ ದುಡ್ಡು ಕೊಡಬೇಕೆಂದು ಟಿ.ವಿ. ಯಲ್ಲಿ ಹೇಳುತ್ತಿದ್ದರು. ಐದು ರೂಪಾಯಿನೋ, ಹತ್ತು ರೂಪಾಯಿನೋ. ಅವರು ಹೇಗೆ survive ಆಗಬೇಕು ಕೆಟ್ಟ ನೀರು ಕುಡಿದರೆ ಖಾಯಿಲೆ ಬರುವುದಿಲ್ಲವಾ? ನಾವೆಲ್ಲಾ ಬಾಟಲ್ ನೀರು ಕುಡಿದು ಕುಳಿತುಕೊಂಡು ಬಿಡುತ್ತೇವೆ. ಏನು ಸಭೆ ಕರೆದ ತಕ್ಷಣ ನಮಗೆ ಅಲ್ಲಿ ಬಾಟಲ್ ಬಂದು ಬಿಡುತ್ತದೆ. What about those people, ಆದ್ದರಿಂದ ಅಧ್ಯಕ್ಷರೆ, ಬರಗಾಲ ಒಂದೇ ಅಲ್ಲ, ಅವರಿಗೆ ಪಾಪ ಕೆಲಸನೂ ಇಲ್ಲ, ದನಕರುಗಳನ್ನೆಲ್ಲಾ ಮಾರಿಕೊಳ್ಳುತ್ತಿದ್ದಾರೆ. ಕಸಾಯಿ ಖಾನೆಗೆ ಹೋಗುತ್ತಿವೆ. ಇವತ್ತು ಜನಗಣತಿ ಮಾಡಿಸಲಿ. ಕ್ಯಾಟಲ್ ಜನಗಣತಿ ಮಾಡಿಸಲಿ. ಎಷ್ಟು ಸಂತೆಗೆ ಹೋಗಿದ್ದಾವೆ? ಎಷ್ಟು ಕಸಾಯಿ ಖಾನೆಗೆ ಹೋಗಿದ್ದಾವೆಂದು. ಎಷ್ಟು ಜನ ರೈತರು ಎತ್ತುಗಳನ್ನು ಮಾರಿಕೊಂಡಿದ್ದಾರೆ? ನಾವೆಲ್ಲಾ ಹಳ್ಳಿಯಿಂದ ಬಂದವರು. ದಿನ ನಿತ್ಯ ಹಳ್ಳಿಯವರ ಸಂಪರ್ಕದಲ್ಲಿರತಕ್ಕಂಥವರು. ನಾನು ನಿರಂತರವಾಗಿ ನಮ್ಮ ಕ್ಷೇತ್ರದ ಜನರ ಜೊತೆಗೆ ಸಂಪರ್ಕದಲ್ಲಿದ್ದೇನೆ. I hope that ಎಲ್ಲರೂ ಕೂಡ ಹಾಗೇಯೇ ಇದ್ದಾರೆಂದು ಅಂದುಕೊಂಡಿದ್ದೇನೆ. ಎಲ್ಲೂ ಕೂಡ ಇವತ್ತು ಬರಗಾಲದ ಕಾಮಗಾರಿಗಳು ವಿಶೇಷವಾಗಿ ನಡೆಯುತ್ತಿರತಕ್ಕದ್ದನ್ನು ನಾನಂತೂ ನೋಡಿಲ್ಲ. ಯುದ್ಧೋಪಾದಿಯಲ್ಲಿ ನಡೆಯುತ್ತಿರತಕ್ಕದ್ದನ್ನು ನಾನಂತೂ ನೋಡಿಲ್ಲ. ನನ್ನ ಗಮನಕ್ಕೂ ಬಂದಿಲ್ಲ. ಆ ತರಹ ಇಡೀ ರಾಜ್ಯದಲ್ಲಿ ಎಲ್ಲೂ ನಡೆಯುತ್ತಿಲ್ಲ. This is the situation ನಾವು ಸರ್ಕಾರದ ಈ ಉತ್ತರವನ್ನು ಕೇಳಿಕೊಂಡು ಕ್ಷೇತ್ರದ ಜನರಿಗೆ ಸರ್ಕಾರ ಈ ತರಹ ಉತ್ತರ ಹೇಳಿದೆ ಎಂದು ನಾವು ಜನರಿಗೆ ಹೇಳುವುದಕ್ಕೆ ತಯಾರಾಗಿಲ್ಲ. ಮುಖ್ಯಮಂತ್ರಿಗಳು ಉತ್ತರ ಹೇಳಿದ್ದಾರೆ. ಇವತ್ತು ಈ ಸರ್ಕಾರ ಈ ರಾಜ್ಯದ ಜನರಿಗೆ ಮೋಸ ಮಾಡುತ್ತಿದೆ. ಅದನ್ನು ಪ್ರತಿಭಟನೆ ಮಾಡಿ we do not want to hear. ಈ ಸರ್ಕಾರದಿಂದ ನಾವು ಏನೂ ಕೇಳುವುದಕ್ಕೆ ತಯಾರಾಗಿಲ್ಲ.

(ಕಾಂಗ್ರೆಸ್ ಸದಸ್ಯರು ಮಾನ್ಯ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಸಭಾ ತ್ಯಾಗ ಮಾಡಿದರು)

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು) :– ಸುಮ್ಮನೇ ರಾಜಕೀಯಕ್ಕಾಗಿ ಬರವನ್ನು ಬಳಸಿಕೊಳ್ಳುವುದು ನ್ಯಾಯವಲ್ಲ.

ಶ್ರೀ ಹೆಚ್.ಡಿ. ರೇವಣ್ಣ :– ಸಾರ್, ನಮಗೂ ಅವಕಾಶ ಕೊಡಿ.